ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ

ಸಿಸಿ ನಂಬರ **118**/2020

ಸಿ ಡಬ್ಲ್ಯೂ- 1

ಪಿ ಡಬ್ಲ್ಯೂ- 1

ದಿಃ 29-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಸುಭಾಶ ನಾಯ್ಕ

ತಂದೆಯ ಹೆಸರುಃ ಗಂಗಾಧರ

ವಯಸ್ಸುಃ **36** ವರ್ಷ

ಉದ್ಯೋಗಃ ವ್ಯಾಪಾರ

ವಿಳಾಸಃ ಹೊನ್ನಿಕೇರಿ, ಅಂಕೋಲಾ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ಚಾಸಾ-4 ನನ್ನ ತಾಯಿ. ದಿಃ 12-01-2019 ರಂದು ನಾನು ಹಾಗೂ ನನ್ನ ತಾಯಿ ಮನೆಯಲ್ಲಿದ್ದು, ನಂತರ ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಹೊನ್ನಿಕೇರಿಯ ಕೆರೆ ರಸ್ತೆಯ ಮುಖಾಂತರ ಮಹಾದೇವ ದೇವಸ್ಥಾನಕ್ಕೆ ಹೋಗುತ್ತಿರುವಾಗ, ಆರೋಪಿತರು ಸದರಿ ರಸ್ತೆಗೆ ಅಡ್ಡಲಾಗಿ ಆವಾರದ ಗೋಡೆ ಹಾಕುತ್ತಿದ್ದರು. ಈ ವಿಷಯದ ಕುರಿತಾಗಿ ಅನಾದಿಕಾಲದಿಂದಲೂ ಓಡಾಡುತ್ತಿರುವ ಕಾಲು ದಾರಿ ಬಿಟ್ಟು ಆವಾರದ ಗೋಡೆ ಹಾಕುವಂತೆ ನನ್ನ ತಾಯಿ ಆರೋಪಿತರಿಗೆ ತಿಳಿಸಿರುತ್ತಾರೆ. ಅದಕ್ಕೆ ಆರೋಪಿತರ ಪೈಕಿ 1 ನೇ ಆರೋಪಿ ನನ್ನ ತಾಯಿಯನ್ನು ಉದ್ದೇಶಿಸಿ, 'ತಾಯಿ ಹಡಾ ರಂಡೆ, ಸೂಳೆ ರಂಡೆ, ಇಲ್ಲಿ ನಿಲ್ಲಬೇಡ ಹೋಗು, ಇದು ನಿನ್ನಪ್ಪನ ಆಸ್ತಿ ಅಲ್ಲ ನಾವು ಖರೀದಿ ಮಾಡಿದ ಆಸ್ತಿ'

ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಸದರಿ ವಿಷಯ ನನ್ನ ತಾಯಿ ಮನೆಗೆ ಬಂದು ನನಗೆ ತಿಳಿಸಿರುತ್ತಾರೆ. ನಂತರ ನನ್ನ ತಾಯಿಯನ್ನು ಮೋಟಾರ ಸೈಕಲ ಮೇಲೆ ಕರೆದುಕೊಂಡು ಪೊಲೀಸ್ ಠಾಣೆಗೆ ಹೋಗುತ್ತಿದ್ದಾಗ, ರಮೇಶ ಜನರಲ್ ಸ್ಟೋರ್ ಹತ್ತಿರ ಆರೋಪಿತರು ನನ್ನ ಮೋಟಾರ ಸೈಕಲ ಅಡ್ಡಗಟ್ಟಿ, ನನಗೆ 3 ನೇ ಆರೋಪಿ ಲೇದರ್ ಪಂಚ್ ಕೈಗೆ ಹಾಕಿಕೊಂಡು ಮುಖಕ್ಕೆ ಹಲ್ಲೆ ಮಾಡಿರುತ್ತಾರೆ ಹಾಗೂ ನನ್ನ ತಾಯಿಗೆ 1 ನೇ ಆರೋಪಿ ಕುತ್ತಿಗೆ ಹಿಡಿದು ದೂಡಿ ಹಾಕಿರುತ್ತಾರೆ. 'ಹಿಂದಿನ ದಿನ ಪುರಸಭೆಗೆ ಪಾಗಾರ ಹಾಕುವ ವಿಷಯವಾಗಿ ಅರ್ಜಿ ನೀಡಿದ್ದೀಯಾ, ನಿನ್ನನ್ನು ಕೊಂದು ಹಾಕುತ್ತೇವೆ' ಎಂದು 1 ನೇ ಆರೋಪಿ ತಿಳಿಸಿರುತ್ತಾನೆ. ಘಟನೆ ಆದಾಗ 11.00 ಗಂಟೆ ಆಗಿತ್ತು.

ನಂತರ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ. ಪೊಲೀಸರು ಅಲ್ಲಿಗೆ ಬಂದು ಘಟನೆ ಕುರಿತು ಮಾಹಿತಿ ಪಡೆದಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಯನ್ನು ಕಾರವಾರ ಆಸ್ಪತ್ರೆಯಲ್ಲಿ ಪಡೆದು, ಮುಂದೆ ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಚಿಕಿತ್ಸೆಗೆ ಅಂದಾಜು ರೂ. 60-70 ಸಾವಿರ ಖರ್ಚಾಗಿದೆ. ಸಾಕ್ಷಿ ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1, ಸಾಕ್ಷಿ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಘಟನೆಯ ದಿವಸ ನಾನು ತೆಗೆದುಕೊಂಡು ಹೋಗುತ್ತಿದ್ದ ಮೋಟಾರ ಸೈಕಲ ನಂ. ಕೆಎ-30/ಎಸ್-7202 ನ್ನು ಸಹ ಜಖಂಗೊಳಿಸಿ ರೂ. 6 ರಿಂದ 8 ಸಾವಿರ ರಿಪೇರಿ ಮಾಡಲು ಖರ್ಚು ಮಾಡಿಸಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

ಈ ಹಂತದಲ್ಲಿ ಎ.ಪಿ.ಪಿ. ಯವರು ಷದ್ರಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕಾಗಿ ಕೋರಿಕೊಂಡಿದ್ದು, ಅನುಮತಿಸಿ, ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>

3 ನೇ ಆರೋಪಿ ಲೇದರ ಪಂಚ್ ನಿಂದ ಹಲ್ಲೆ ಮಾಡಿಲ್ಲ, ಆದರೆ ಕೈ ಮುಷ್ಟಿಯಿಂದ ಹಲ್ಲೆ ಮಾಡಿರುತ್ತಾರೆ ಎಂದು ದಿಃ 16-04-2019 ರಂದು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೈಗೆ ಹಾಕಿಕೊಂಡ ಲೇದರ ಪಂಚ್ ನಿಂದ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿದಾರರ ಮರುಹೇಳಿಕೆ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ಚಾಸಾ-8 ಮತ್ತು 9 ರವರು ಘಟನೆಯನ್ನು ತಪ್ಪಿಸಿರುತ್ತಾರೆ ಎಂದರೆ ಸರಿ. ಹಲ್ಲೆ ಮಾಡುವ ಸಮಯದಲ್ಲಿ ಅವಾಚ್ಯ ಶಬ್ದಗಳಿಂದ ನಮಗೆ ಬೈದಿರುತ್ತಾರೆ ಎಂದರೆ ಸರಿ.

<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಜಿ.ವಿ. ಎನ್. ವಕೀಲರಿಂದಃ</u>

ಚಾಸಾ-2 ವೃತ್ತಿಯಿಂದ ಮೊಬೈಲ್ ಶಾಪ್ ನಡೆಸುತ್ತಾನೆ ಎಂದರೆ ಸರಿ. ಚಾಸಾ-2,3,7 ಮತ್ತು 8 ರವರು ನನಗೆ ಬೇಕಾದ ವ್ಯಕ್ತಿಗಳು ಎಂದರೆ ಸಾಕ್ಷಿ ಅವರು ನಮ್ಮ ಊರಿನವರು ಎಂದು ಹೇಳುತ್ತಾರೆ. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ 1 ನೇ ಆರೋಪಿತನು ನಮ್ಮ ಮನೆಯ ಲಗ್ತ ಇರುವ ಜಾಗೆಯನ್ನು ಖರೀದಿಸಿದ್ದ ಎಂದರೆ

ಸರಿಯಲ್ಲ. ಆತನು ಖರೀದಿಸಿದ್ದನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಮೂರು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಒಂದು ದಾವೆ ದಾಖಲಿಸಿದ್ದೇನೆ ಎಂದು ಹೇಳುತ್ತಾರೆ. ದಾವೆ ದಾಖಲಿಸಿದ ನಂತರ ಆರೋಪಿತರು ಹಾಗೂ ನನ್ನ ನಡುವೆ ಮಾತುಕತೆ ಇಲ್ಲ ಎಂದರೆ ಸರಿ. 1 ನೇ ಆರೋಪಿ ಖರೀದಿಸಿದ ಆಸ್ತಿಯನ್ನು ನಾನು ಖರೀದಿಸಬೇಕೆಂದು ಪ್ರಯತ್ನಿಸಿದ್ದೆ ಎಂದರೆ ಆಸ್ತಿ ಖರೀದಿಸಿಯೇ ಇಲ್ಲ ಎಂದು ಹೇಳುತ್ತಾರೆ.

ಮಹಾದೇವ ದೇವಸ್ಥಾನಕ್ಕೆ ನನ್ನ ತಾಯಿ ಹೊರತುಪಡಿಸಿ, ಸಾರ್ವಜನಿಕರೂ ಸಹ ಪೂಜೆ ಪುನಸ್ಕಾರಕ್ಕೆ ಹೋಗಿ ಬರುತ್ತಾರೆ ಎಂದರೆ ಸರಿ. ಘಟನೆ ನಡೆದಿದೆ ಎನ್ನುವ ಸ್ಥಳದ ಮೂಲಕ ಸಾಕಷ್ಟು ವಾಹನಗಳು ಹಾಗೂ ಜನರು ಓಡಾಡುತ್ತಾರೆ ಎಂದರೆ ಸರಿ. ಒಂದು ವೇಳೆ ಸದರಿ ಘಟನಾಸ್ಥಳದಲ್ಲಿ ಏನಾದರೂ ಅಡೆತಡೆ ಉಂಟಾದರೆ ನೂರಾರು ವಾಹನಗಳು ನಿಲ್ಲುತ್ತವೆ ಎಂದರೆ ಸರಿ. ಸದರಿ ಸ್ಥಳದ ಬಳಿ ಪಾನ್ ಶಾಪ್, ಕೋಳಿ ಅಂಗಡಿ ಹಾಗೂ ಇತರ ಅಂಗಡಿಗಳಿವೆ ಎಂದರೆ ಸರಿ. ಘಟನಾ ಸಮಯದಲ್ಲಿ 10–20 ಜನ ಸಾರ್ವಜನಿಕರು ಸೇರಿದ್ದರು. ದೇವಸ್ಥಾನಕ್ಕೆ ನನ್ನ ತಾಯಿ ಹೋಗುವಾಗ ಮೇಲೆ ತಿಳಿಸಿದಂತೆ 1 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದ ಬಗ್ಗೆ ಪಿರ್ಯಾದಿಯಲ್ಲಿ ತಿಳಿಸಿಲ್ಲ, ಆದರೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ತಿಳಿಸಿದ್ದೇನೆ ಎಂದು ಹೇಳುತ್ತಾರೆ. ನನ್ನ ತಾಯಿಗೆ 1 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಸದರಿ ಸಂಗತಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ನಾನು ರಾಜಕೀಯ ಪಕ್ಷದ ಧುರೀಣ ಎಂದರೆ ಸಾಮಾನ್ಯ ಕಾರ್ಯಕರ್ತ ಇರುತ್ತೇನೆ ಎಂದು ಹೇಳುತ್ತಾರೆ. ನನ್ನ ಬಳಿ ಪೊಲೀಸ್ ಠಾಣೆ ನಂಬರ, ಸರ್ಕಾರಿ ಆಸ್ಪತ್ರೆಯ ನಂಬರ ಇದೆ ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ಯಾವುದಾದರೂ ಕೆಲಸವಾಗಬೇಕಾದರೆ ನಮ್ಮ ಮುಖಂಡರ ಮುಖಾಂತರ ಫೋನ್ ಮಾಡಿಸಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ 1 ನೇ ಆರೋಪಿ ಬೈದಿರುತ್ತಾನೆ ಎಂದು ಹೇಳಿದ ತಕ್ಷಣ ಪೊಲೀಸ್ ಠಾಣೆಗೆ ಈ ಕುರಿತು ಫೋನ್ ಮುಖಾಂತರ ಮಾಹಿತಿ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಹೇಳಿಕೆ ನೀಡುವ ಪೂರ್ವದಲ್ಲಿ ನನ್ನ ತಾಯಿ ಠಾಣೆಗೆ ಹೋಗಿ ದೂರು ನೀಡಿಲ್ಲ, ಆದರೆ ಘಟನೆ ಕುರಿತು ಹೇಳಿಕೆ ನೀಡಿರುತ್ತಾರೆ. ನನ್ನ ತಾಯಿ ಅಂದಾಜು 10.30 ಗಂಟೆಗೆ ಠಾಣೆಗೆ ಹೋಗಿದ್ದಳು.

ಘಟನೆ ಅಂದಾಜು 10-15 ನಿಮಿಷ ನಡೆದಿರಬಹುದು. ಘಟನೆ ನಡೆದ ನಂತರ ಠಾಣೆಗೆ ಹೋಗಿ ದೂರು ನೀಡಿ, ನಂತರ ಆಸ್ಪತ್ರೆಗೆ ಹೋಗಲು ತೊಂದರೆ ಇತ್ತಾ ಎಂದರೆ ಸಾಕ್ಷಿ, ಠಾಣೆಗೆ ಹೋದರೂ ಸಹ ನನಗೆ ಪೆಟ್ಟಾಗಿದ್ದರಿಂದ ಪ್ರಕರಣ ದಾಖಲಿಸುವಷ್ಟು ದೈಹಿಕ ಸಾಮರ್ಥ್ಯ ಇಲ್ಲದೇ ಇರುವುದರಿಂದ ಆಸ್ಪತ್ರೆಗೆ ಹೋಗಿದ್ದೇನೆ ಎಂದು ಹೇಳುತ್ತಾರೆ. ಠಾಣೆಯಿಂದ ಆಸ್ಪತ್ರೆಗೆ ನಾನು ಹೋಗುವಾಗ ನನ್ನ ಜೊತೆ ಪೊಲೀಸರು ಬಂದಿರುವುದಿಲ್ಲ. ಆ ದಿನ ನಾನು ಪೊಲೀಸ್ ಠಾಣೆಗೆ ಒಬ್ಬನೇ ಹೋಗಿದ್ದೆ.

ಆಸ್ಪತ್ರೆಯಲ್ಲಿ ನಾನು 11.00 ಗಂಟೆಗೆ ದಾಖಲಾಗಿರುತ್ತೇನೆ. ಘಟನಾಸ್ಥಳದಿಂದ ಆಸ್ಪತ್ರೆ ವಾಹನದ ಮೇಲೆ 5 ನಿಮಿಷದಲ್ಲಿ ಬರಬಹುದು, ನಡೆದುಕೊಂಡು ಬಂದರೆ 10

ನಿಮಿಷ ಬೇಕಾಗುತ್ತದೆ ಎಂದರೆ ಸರಿ. ಆ ದಿನ ಅಂಕೋಲಾ ಆಸ್ಪತ್ರೆಯಲ್ಲಿ ಅಂದಾಜು 1 ಗಂಟೆಯವರೆಗೆ ಇದ್ದೆ. ಪೊಲೀಸರು ಅಂದಾಜು 11.10 ಕ್ಕೆ ಆಸ್ಪತ್ರೆಗೆ ಬಂದಿದ್ದರು. ನನಗೆ ಬಿಪಿ, ಶುಗರ್ ಇರುವುದಿಲ್ಲ, ಆದರೆ ಘಟನೆ ಸಮಯದಲ್ಲಿ ಬಿಪಿ ಜಾಸ್ತಿ ಆಗಿತ್ತು. ಕಾರವಾರ ಆಸ್ಪತ್ರೆಗೆ ಅದೇ ದಿನ ಹೋಗಿರುತ್ತೇನೆ. ಅಲ್ಲಿಯೂ ಸಹ ಚಿಕಿತ್ಸೆ ನೀಡಿರುತ್ತಾರೆ. ಈ ಕುರಿತು ಪೊಲೀಸರಿಗೆ ತಿಳಿಸಿದ್ದೇನೆ. ಕಾರವಾರ ಹಾಗೂ ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಪೊಲೀಸರಿಗೆ ತಿಳಿಸಿದ್ದೇನೆ, ಆದರೆ ದಾಖಲಾತಿ ನನ್ನ ಬಳಿ ಇದೆ. ಚಿಕಿತ್ಸೆ ಪಡೆದ ಬಗ್ಗೆ ಇರುವ ದಾಖಲಾತಿ ತನಿಖಾಧಿಕಾರಿಗೆ ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ.

1 ನೇ ಆರೋಪಿ ನನ್ನ ತಾಯಿಗೆ ಬೆಳಿಗ್ಗೆ 10.00 ಗಂಟೆಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ದಿವಸ ನನ್ನ ತಾಯಿ ಹಾಗೂ ನಾನು ಮೋಟಾರ ಸೈಕಲ ಮೇಲೆ ಜೋರಾಗಿ ಹೋಗಿ ಬಿದ್ದು, ಮಾಡಿಕೊಂಡ ಗಾಯದ ದುರುಪಯೋಗಪಡಿಸಿಕೊಂಡು, ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎನ್ನುವಾಗ 3 ನೇ ಆರೋಪಿ ಉದ್ದೇಶಿಸಿ 'ಬೋಳಿ ಮಕ್ಕಳಾ, ಸೂಳೆ ಮಕ್ಕಳಾ, ನಮ್ಮ ಜಾಗೆಯಲ್ಲಿ ಬಂದು ಕಂಪೌಂಡ್ ಕಟ್ಟುತ್ತೀರಿ, ಕಂಪೌಂಡ ಕಟ್ಟಲು ಹೇಳಿದ್ದು ಯಾರು ಎಂದು ಬೈದಿರುತ್ತೀರಿ' ಎಂದರೆ ಸರಿಯಲ್ಲ. ಅದೇ ದಿನ ರಮೇಶ ನಾಯ್ಕರವರ ಕೊಲ್ಡ ಡಿಂಕ್ಸ ಅಂಗಡಿ ಬಳಿ 1 ಮತ್ತು 4 ನೇ ಆರೋಪಿ ಇಬ್ಬರು ಇದ್ದಾಗ ನಾನು ಮತ್ತು ನನ್ನ ತಾಯಿ ಸೇರಿ 3 ನೇ ಆರೋಪಿಯನ್ನು ಉದ್ದೇಶಿಸಿ, 'ಬೋಳಿ ಮಗನೇ, ಸೂಳೆ ಮಗನೇ, ನೀನು ಎಲ್ಲಿಂದಲೋ ಬಂದು ನಮ್ಮ ಜಾಗೆಯಲ್ಲಿ ಕಂಪೌಂಡ್ ಗೋಡೆ ಕಟ್ಟಿಸುತ್ತೀಯಾ' ಎಂದು ಹೇಳಿ 3 ನೇ ಆರೋಪಿಗೆ ಕೈಯಿಂದ ಹಲ್ಲೆ

ಮಾಡಿರುತ್ತೇನೆ ಹಾಗೂ ಹಲ್ಲಿನಿಂದ ಎದೆಯ ಬಲ ಭಾಗಕ್ಕೆ ಕಚ್ಚಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಸಹ 3 ನೇ ಆರೋಪಿಗೆ ಹಲ್ಲೆ ಮಾಡಿರುತ್ತಾರೆ, ಬಟ್ಟೆ ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಆರೋಪಿ ಸಲ್ಲಿಸಿದ ಪ್ರಕರಣದಿಂದ ಬಚಾವಾಗಲು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ.

3 ನೇ ಆರೋಪಿ ಲೇದರ ಪಂಚ್ ನಿಂದ ನನ್ನ ಮುಖಕ್ಕೆ ಹಲ್ಲೆ ಮಾಡಿರುತ್ತಾನೆ ಎಂದು ಸುಳ್ಳು ಬರೆಸಿದ್ದೆ ಎಂದರೆ ಸರಿಯಲ್ಲ. ಉಳಿದ ಆರೋಪಿತರು ಹಲ್ಲೆ ಮಾಡಿದ ಕುರಿತು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ 1 ನೇ ಆರೋಪಿ ಹಲ್ಲೆ ಮಾಡಿರುತ್ತಾನೆ ಎಂದು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಖರೀದಿಸಿದ ಆಸ್ತಿಯನ್ನು ಕಬಳಿಸಲು ರಾಜಕೀಯವಾಗಿ ಪ್ರಭಾವ ಬಳಸಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಹಾಗೂ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

ಜೆ ಎಂ ಎಫ ಸಿ, ಅಂಕೋಲಾ.